

ರಾಜಪ್ಪ ತಟ್ಟನೆ ಎದ್ದು ಕುಳಿತ. ಅವನ ದೇಹ ಬೆವರಿನಿಂದ ಒದ್ದೆಯಾಗಿತ್ತು. ಪಕ್ಕದಲ್ಲಿ ಮಾಸಿ ಹೋಗಿದ್ದ ಬಣ್ಣದ ಟವಲಿನಿಂದ ಬೆನ್ನನ್ನು ಒರಸಿಕೊಂಡ. ಎಂತಹ ವಿಚಿತ್ರ ಕನಸು.

'ವನದಂತಹ ಸ್ಥಳ. ಹಾವಿನ ಹುತ್ತದಂತೆ ಎತ್ತರಕ್ಕೆ ಬೆಳೆದಿದ್ದ ಮಣ್ಣಿನ ದಿಬ್ಬದಂತಹ ದೊಡ್ಡ ಗುಹೆಗಳು. ಅವನು ಒಂಟಿಯಾಗಿ ಆ ಹಾದಿಯಲ್ಲಿ ಹೋಗುತ್ತಿದ್ದಾನೆ. ಅಲ್ಲಿ ತುಂಬಿದ್ದ ನಿಶ್ಯಬ್ದ ಒಂದು ಹೊರೆಯಾಗಿ ಅವನ ಹೃದಯವನ್ನು ಅದುಮುತ್ತದೆ. ಗುಹೆಗಳಿಂದ ಹಾವುಗಳು ಹೊರಟು ತನ್ನ ಮೇಲೆ ದಾಳಿ ಮಾಡುವವೋ ಎಂಬ ಭಯ ಅವನನ್ನು ಬಿರುಸಾಗಿ ನಡೆಯಲು ಒತ್ತಾಯಿಸುತ್ತದೆ. ಗುಹೆಗಳಲ್ಲಿ ಹಾವುಗಳಿಲ್ಲ. ದಿಢೀರೆಂದು ಅಲ್ಲಿಂದ ಗುಂಪು ಗುಂಪಾಗಿ ಜನಗಳು ಹೊರ ಬರುತ್ತಾರೆ. ಎಲ್ಲರೂ ಹೆಳವರು! ಅಪ್ಪ, ಅಮ್ಮ, ಮಕ್ಕಳು ಎಂದು ಕುಟುಂಬಗಳ ಸಮೇತ ಹೆಳವರು! ಅವರು ಸಾಲಾಗಿ ನಿಂತು ಅವನನ್ನು ನೋಡುತ್ತಾರೆ. ಅವರ ನೋಟದ ತೀಕ್ಷ್ಣತೆಗೆ ಅವನ ಕೈ ಸಹಾ ಸ್ವಲ್ಪ